## ಪ್ರಾರ್ಥನೆ

# ಗೋವಿಂದಾಷ್ಟಕಮ್ – ೧



**ಸತ್ಯಂ ಜ್ಞಾನಮನಂತಂ ನಿತ್ಯಮನಾಕಾಶಂ ಪರಮಾಕಾಶಂ**
**ಗೋಷ್ಠ ಪ್ರಾಂಙಣರಿಂಗಣಲೋಲಮನಾಯಾಸಂ ಪರಮಾಯಾಸಮ್ ।**
**ಮಾಯಾಕಲ್ಪಿತನಾನಾಕಾರಮನಾಕಾರಂ ಭುವನಾಕಾರಂ**
**ಕ್ಷ್ಮಾಯಾ ನಾಥಮನಾಥಂ ಪ್ರಣಮತ ಗೋವಿಂದಂ ಪರಮಾನಂದಮ್ ॥ ೧ ॥**

ಸತ್ಯ , ಜ್ಞಾನ, ಅನಂತ ಸ್ವರೂಪನೂ ನಿತ್ಯನೂ ಆಗಿರುವ, ಆಕಾಶರಹಿತನಾದರೂ ಪರಮಾಕಾಶಸ್ವರೂಪನಾಗಿರುವ, ಲೀಲಾಜಾಲವಾಗಿ ಗೋಶಾಲೆಯ ಅಂಗಳದಲ್ಲಿ ಅಂಬೆಗಾಲಿಡುತ್ತಿದ್ದರೂ ಬಹಳ ಆಯಾಸಗೊಂಡಿರುವ, ನಿರಾಕಾರನಾದರೂ ಮಾಯಾಕಲ್ಪಿತವಾದ ವಿವಿಧ ಆಕಾರಗಳಿಂದ ಕೂಡಿರುವ, ವಿರಾಡ್ರೂಪದಿಂದ ಭುವನಾಕಾರವನ್ನು ಹೊಂದಿರುವ, ಭೂಮಿಗೆ ಒಡೆಯನಾದ, ಬೇರೊಬ್ಬ ಒಡೆಯನಾರೂ ಇಲ್ಲದ, ಪರಮಾನಂದರೂಪಿ ಗೋವಿಂದನನ್ನು ನಮಸ್ಕರಿಸಿರಿ.

**ಮೃತ್ಸ್ನಾಮತ್ಸೀಹೇತಿ ಯಶೋದಾತಾಡನಶೈಶವಸಂತ್ರಾಸಂ**
**ವ್ಯಾದಿತವಕ್ತ್ರಾಽಽಲೋಕಿತಲೋಕಾಲೋಕಚತುರ್ದಶಲೋಕಾಲಿಮ್ ।**
**ಲೋಕತ್ರಯಪುರಮೂಲಸ್ತಂಭಂ ಲೋಕಾಲೋಕ ಮನಾಲೋಕಂ**
**ಲೋಕೇಶಂ ಪರಮೇಶಂ ಪ್ರಣಮತ ಗೋವಿಂದಂ ಪರಮಾನಂದಮ್ ॥ ೨ ॥**

ಮಣ್ಣನ್ನು ತಿನ್ನಬೇಡವೆಂದ ಯಶೋದೆಯಿಂದ ಪೆಟ್ಟು ತಿಂದ ಬಾಲಕನು, ತೆರೆದ ಬಾಯಲ್ಲಿ ಹದಿನಾಲ್ಕು ಲೋಕಗಳನ್ನು ತೋರಿಸಿದವನು. ತ್ರಿಲೋಕಗಳಿಗೂ ಮೂಲಾಧಾರವಾಗಿರುವವನು. ಲೋಕಾಲೋಕಗಳಿಂದ ದರ್ಶನಾತೀತನಾದರೂ ಲೋಕೇಶನು. ಪರಮೇಶ್ವರನೂ, ಪರಮಾನಂದರೂಪಿಯೂ ಆದ ಗೋವಿಂದನನ್ನು ನಮಸ್ಕರಿಸಿರಿ.

**ತ್ರೈವಿಷ್ಟಪರಿಪುವೀರಘ್ನಂ ಕ್ಷಿತಿಭಾರಘ್ನಂ ಭವರೋಗಘ್ನಂ**
**ಕೈವಲ್ಯಂ ನವನೀತಾಹಾರಮನಾಹಾರಂ ಭುವನಾಹಾರಮ್ ।**
**ವೈಮಲ್ಯಸ್ಫುಟಚೇತೋವೃತ್ತಿವಿಶೇಷಾಭಾಸಮನಾಭಾಸಂ**
**ಶೈವಂ ಕೇವಲಶಾಂತಂ ಪ್ರಣಮತ ಗೋವಿಂದಂ ಪರಮಾನಂದಮ್ ॥ ೩ ॥**

ದೇವತೆಗಳ ಶತ್ರುಗಳನ್ನು ಸಂಹರಿಸಿದವನು, ಭೂಭಾರವನ್ನು ಇಳಿಸಿದವನು, ಸಂಸಾರರೋಗವನ್ನು ನಾಶಪಡಿಸುವವನು, ಮೋಕ್ಷಸ್ವರೂಪನು, ವಿಶ್ವವೇ ಆಹಾರವಾಗಿರುವವನು, ಆಹಾರವೇ ಬೇಡವಾಗಿರುವವನು, ಬೆಣ್ಣೆ ಮೆಲ್ಲುವವನು ನೀನು. ಆಭಾಸರಹಿತನಾದರೂ ಶುದ್ಧ ಚಿತ್ತ ವೃತ್ತಿಯಲ್ಲಿ ವಿಶೇಷ ಆಭಾಸದಿಂದ ದೃಗ್ಗೋಚರನು ನೀನು. ಮಂಗಳಮಯಸ್ವರೂಪನಾದ, ಕೇವಲನೂ ಶಾಂತನೂ ಆದ ಗೋವಿಂದನನ್ನು ನಮಸ್ಕರಿಸಿರಿ.

— ಶ್ರೀ ಶಂಕರಾಚಾರ್ಯ

## ಸೂಕ್ತಿಪ್ರಭ

**ಬು**ದ್ಧಿಯು ಮಾಡುವ ಮಹತ್ಕಾರ್ಯ ಯಾವುದೆಂದರೆ, ಕೆಲವು ಸಂಗತಿಗಳು ಬುದ್ಧಿಯನ್ನು ಕೂಡ ಮೀರಿದ್ದೆಂದು ಮಾನವನಿಗೆ ತಿಳಿಸಿ ಕೊಡುವುದು.

— ಬ್ಲೇಸ್ ಪಾಸ್ಕಲ್

**ಪ್ರಾ**ಯೋಗಿಕವಾದ ಒಂದು ಕೆಲಸವನ್ನು ಪ್ರಾರಂಭ ಮಾಡಲು ಒತ್ತಾಯಿಸುವ ಯಾವುದೇ ಅವಕಾಶವನ್ನೂ ಬಿಡಬೇಡ – ಅದು ಎಷ್ಟು ಸಣ್ಣದೇ ಆಗಿರಲಿ. ಒಂದು ಸಣ್ಣ ಸಾಸಿವೆ ಬೀಜ ಹೇಗೆ ಮೊಳಕೆಯೊಡೆದು, ಬೇರು ಬಿಡುತ್ತದೆ ಎಂಬುದು ಅತ್ಯಂತ ಅದ್ಭುತವಾಗಿರುತ್ತದೆ.

— ಫ್ಲಾರೆನ್ಸ್ ನೈಟಿಂಗೇಲ್

**ಭ**ಗವಂತನ ಅಪಾರ ಕಾರುಣ್ಯಾದಿಗಳನ್ನು ಸ್ಮರಿಸಿಕೊಂಡು ಕರಗಿಹೋದ ಚಿತ್ತವೃತ್ತಿಯು ಆತನಲ್ಲಿಯೇ ಧಾರಾಕಾರವಾಗಿ ಹರಿಯುತ್ತಿದ್ದರೆ, ಆ ಚಿತ್ತವೃತ್ತಿಯು ಭಕ್ತಿ ಎನಿಸಿಕೊಳ್ಳುತ್ತದೆ.

— ಭಕ್ತಿರಸಾಯನ

**ಎ**ಲ್ಲಿ ಜ್ಞಾನಿಯು ಎಲ್ಲ ಪ್ರಾಣಿಗಳಲ್ಲಿಯೂ ತನ್ನ ಆತ್ಮವನ್ನೇ ಕಾಣುವನೋ, ಎಲ್ಲಿ ಏಕತ್ವವನ್ನೇ ನೋಡುವನೋ ಅಲ್ಲಿ ಮೋಹವೆಲ್ಲಿ? ಶೋಕವೆಲ್ಲಿ?

— ಈಶಾವಾಸ್ಯೋಪನಿಷತ್ತು

**ದೇ**ವರು ನಮ್ಮ ಸ್ನೇಹಿತ. ಅವನ ಮೂಲಕ ಎಲ್ಲರೂ ನಮ್ಮ ಸ್ನೇಹಿತರೇ.

— ತುಕಾರಾಮ